| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1036 (1288) |
| ಸದಸ್ಯರ ಹೆಸರು: | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 15.03.2021 |
| ಉತ್ತರಿಸುವವರು: | ಮಾನ್ಯ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸೇವೆಯಲ್ಲಿರುವ ನೌಕರರು ಸ್ಥಳೀಯ ವೃಂದ ಸೇರಲು ನಿಯಮಾನುಸಾರ ನೀಡಬೇಕಾದ ದಾಖಲೆಗಳು ಯಾವುವು; ಹಾಗೂ ಅರಣ್ಯ ಇಲಾಖೆಯಲ್ಲಿ ಸುಳ್ಳು ದಾಖಲೆ ನೀಡಿ ಸ್ಥಳೀಯ ವೃಂದ ಸೇರಿರುವ ಬಗ್ಗೆ ದೂರುಗಳು ಬಂದಿದೆಯೇ; ದೂರುಗಳು ಬಂದಿದ್ದರೆ, ಯಾವ ಯಾವ ಹಂತದಲ್ಲಿದೆ; | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, 2013 ರ ನಿಯಮ 3(2) ರಲ್ಲಿ ತಿಳಿಸಿರುವಂತೆ ಸರ್ಕಾರಿ ನೌಕರರ ಸ್ಥಳೀಯ ವೃಂದ ಸೇರಲು ನೀಡಬೇಕಾದ ದಾಖಲೆಗಳ ವಿವರ ಈ ಕೆಳಕಂಡಂತಿದೆ.<br>(ಎ) ಜನನ ಪ್ರಮಾಣ ಪತ್ರ, ಅಥವಾ<br>(ಬಿ) ವಾಸಸ್ಥಳ ಪ್ರಮಾಣ ಪತ್ರ, ಅಥವಾ<br>(ಸಿ) ವ್ಯಾಸಂಗ ಪ್ರಮಾಣ ಪತ್ರ, ಅಥವಾ<br>(ಡಿ) ವಿವಾಹ ಪ್ರಮಾಣ ಪತ್ರ, ಅಥವಾ<br>(ಇ) ಸ್ವಗ್ರಾಮ (ಅಥವಾ ಸ್ಥಳ) ಪ್ರಮಾಣ ಪತ್ರ, ಅಥವಾ<br>(ಎಫ್) ವಾರಸ ಪ್ರಮಾಣ ಪತ್ರ; ಅಥವಾ<br>(ಜಿ) ಈ ಮೇಲಿನ ಪ್ರಮಾಣ ಪತ್ರಗಳ ಒಂದು ಅಥವಾ ಹೆಚ್ಚಿನ ಸಂಯೋಜನೆ<br>ಸ್ಥಳೀಯ ವೃಂದ ಸೇರಿರುವ ಬಗ್ಗೆ ದೂರುಗಳ ಸ್ವೀಕೃತವಾಗಿದ್ದು, ಅವುಗಳು ಪರಿಶೀಲನಾ ಹಂತದಲ್ಲಿರುತ್ತವೆ. |
| ಆ) | ಅರಣ್ಯ ಇಲಾಖೆಯಲ್ಲಿ 371J ಅಡಿಯಲ್ಲಿ ಅನುಬಂಧ–B ಯಲ್ಲಿ ವಾಸಸ್ಥಳ ಪ್ರಮಾಣಪತ್ರ ನೀಡಿ ಸ್ಥಳೀಯ ವೃಂದಕ್ಕೆ ಸ್ಥಳೀಯರಲ್ಲದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸೇರಿ ಬಡ್ತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; | ಈ ಕುರಿತು ದೂರುಗಳು ಸ್ವೀಕೃತವಾಗಿದ್ದು, ಸದರಿ ದೂರುಗಳು ಪರಿಶೀಲನಾ ಹಂತದಲ್ಲಿರುತ್ತವೆ. ಪರಿಶೀಲನಾ ವರದಿ ಆಧಾರದ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. |
| ಇ) | ಸುಳ್ಳು ದಾಖಲೆ ನೀಡಿ ಸರ್ಕಾರಿ ಸೇವೆಯಲ್ಲಿ ಬಡ್ತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು? | |

ಅಪಜೀ 75 ಅಪಸೇ 2021 (ಇ)

(ಅರವಿಂದ ಲಿಂಬಾವಳಿ)
ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು